<u>ಗೌರಿಬಿದನೂರು ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯದಲ್ಲಿ</u>

ಸಿ.ಸಿ.**114/2021**
ಪಿ.ಡಬ್ಲ್ಯೂ-**7**
ಸಿ.ಡಬ್ಲ್ಯೂ-**15**

ಸಾಕ್ಷಿದಾರರ ಹೆಸರು ಃ ರವಿ ಎಸ್.
ತಂದೆ ಹೆಸರು ಃ ಸಂಜೀವಪ್ಪ
ವಯಸ್ಸು ಃ **45** ವರ್ಷ
ಕೆಲಸ ಃ **Police Inspector**
ವಾಸ ಸ್ಥಳ ಃ ಬೆಂಗಳೂರು
ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾದ ದಿನಾಂಕಃ **06-02-2026**

<u>ಮುಖ್ಯ ವಿಚಾರಣೆಃ ಶ್ರೀ ಎ.ಪಿ.ಪಿ. ವಕೀಲರಿಂದಃ</u>

September 2019 ರಿಂದ January-2021 ರ ವರೆಗೆ ಗೌರಿಬಿದನೂರು ವೃತ್ತ ನಿರೀಕ್ಷಕನಾಗಿ ಕಾರ್ಯನಿರ್ವಹಿಸುತ್ತಿದೆ.

ದಿಃ 28.12.2020 ರಂದು ಗೌರಿಬಿದನೂರು ಗ್ರಾಮಾಂತರ ಠಾಣಾ ಮೊ.ಸಂ. 338/2020 ರನ್ನು ಚಾಸಾ-14 ರವರಿಂದ ಪಡೆದುಕೊಂಡಿರುತ್ತಾನೆ. ಅದೇ ದಿನ ಕೃತ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-3 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ನಿಪಿ-12 ಅನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಸಂಜೆ 4.00 ರಿಂದ 5.00 ಸಮಯದಲ್ಲಿ ಬರೆದಿರುತ್ತೇನೆ. ಅದೇ ಸಮಯದಲ್ಲಿ ಕಚ್ಚ ನಕ್ಷೆಯನ್ನು ತಯಾರು ಮಾಡಿರುತ್ತೇನೆ. ಕೃತ ನಡೆದ ಸ್ಥಳದಲ್ಲಿ ಇದ್ದ KA-01-ME-6550 ಕಾರನ್ನು ಮತ್ತು ಅಪಘಾತಕ್ಕೆ ಒಳಗಾದ KA-06-EM-6926 ವಾಹನಗಳನ್ನು ಠಾಣಾ ಪಟ್ಟಿಯಲ್ಲಿ ಸೇರಿಸಿ, IMV ತಪಾಸಣೆಗಾಗಿ ವಶಪಡಿಸಿಕೊಂಡಿರುತ್ತೇನೆ. ಅದೇ ದಿನ ಗೌರಿಬಿದನೂರು ಸರ್ಕಾರಿ ಆಸ್ಪತ್ರೆಯಿಂದ ಶವ ಪಂಚನಾಮೆಯನ್ನು ಬೆಳಿಗ್ಗ 10.30 ರಿಂದ 12.30 ರವರೆಗೆ ಚಾಸಾ-6 ರಿಂದ 8 ರವರ ಸಮಕ್ಷಮ ಜರುಗಿಸಿರುತ್ತೇನೆ. ಅದೇ ದಿನ ಚಾಸಾ-3, 9, 10 ಮತ್ತು 11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಫಾರಂ ನಂ. 146- 1 ಮತ್ತು 2 ಅನ್ನು ಭರ್ತಿ ಮಾಡಿ PM ನಡೆಸಲು ಚಾಸಾ-14 ರವರನ್ನು ನೇಮಕ ಮಾಡಿರುತ್ತೇನೆ. ತದನಂತರ ಶವವನ್ನು ವಾರಸುದಾರರಿಗೆ ಹಸ್ತಾಂತರ ಮಾಡಿರುತ್ತೇನೆ.

ಅದೇ ದಿನ KA-06-EM-6926 ವಾಹನದ ಚಾಲಕ ಠಾಣೆಗೆ ಹಾಜರಾಗಿದ್ದು ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಂಡು ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ.

ದಿಃ 01.01.2021 ರಂದು ಚಿಕ್ಕಬಳ್ಳಾಪುರ RTO ಅಧಿಕಾರಿಯಿಂದ ಅಪಘಾತಕ್ಕೆ ಒಳಗಾದ ವಾಹನಗಳನ್ನು IMV ಪರೀಕ್ಷೆಯನ್ನು ಮಾಡಲು ಮನವಿ ಸಲ್ಲಿಸಿ, ತಪಾಸಣೆ ಮಾಡಿಸಿರುತ್ತೇನೆ. ಅದೇ ದಿನ ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 02.01.2021 ರಂದು IMV ವರದಿಯನ್ನು RTO ಅಧಿಕಾರಿಗಳಿಂದ ಪಡೆದುಕೊಂಡಿರುತ್ತೇನೆ. ದಿಃ 16.01.2021 ರಂದು ಆರೋಪಿ ವಾಹನದ ಮಾಲೀಕ ಮತ್ತು ಚಾಲಕನಾಗಿದ್ದು Indemnity Bond ಪಡೆದುಕೊಂಡು ವಾಹನವನ್ನು ಸೂಕ್ತ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಬಿಡುಗಡೆ ಮಾಡಿರುತ್ತೇನೆ.
ದಿಃ 18.01.2021 ರಂದು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತ ನರಸಿಂಹಮೂರ್ತಿ ರವರ PM ವರದಿಯನ್ನು ಪಡೆದುಕೊಂಡು ತನಿಖೆಯನ್ನು ಪೂರ್ಣ ಗೊಳಿಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಗೆ ನಿಪಿ-12 ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನಿಪಿ-**12** ಡಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಕಚ್ಚ ನಕ್ಷೆಯನ್ನು ತೋರಿಸಲಾಗಿ, ಸಾಕ್ಷಿಯು ತಾನು ತಯಾರು ಮಾಡಿರುವುದಾಗಿ ನುಡಿದಿರುತ್ತಾರೆ, ಅದರನ್ನು ನಿಪಿ-**17** ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಪಿ-**17** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-14 ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನಿಪಿ-**14** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-15 ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನಿಪಿ-**15** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-16 ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನಿಪಿ-**16** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-13 ನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನಿಪಿ-**13** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-2 ರಿಂದ 10 ನ್ನು ತೋರಿಸಲಾಗಿ, ಅವುಗಳನ್ನು ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ . ವಿ.ವಿ.ಕೆ.. ವಕೀಲರಿಂದಃ</u>

ನಿಪಿ-17 ರಲ್ಲಿ ಕಂಡ ದಾರಿಯು ಅಂಕು ಡೊಂಕು ಎಂದರೆ ರಸ್ತೆಗೆ ಹಾಕಿರುವ ಟಾರ್ ಕಿತ್ತು ಹೋಗಿರುತ್ತದೆ. ರಸ್ತೆಗೆ ಹಾಕಿರುವ ಟಾರ್ ಕಿತ್ತು ಹೋಗಿ ಗುಂಡಿ ಬಿದ್ದ ಕಾರಣ ಅಪಘಾತ ನಡೆಯಿತು ಎಂದರೆ ಸರಿಯಲ್ಲ. ವಾಹನೆ ಚಾಲನೆ ಮಾಡುತ್ತಿರುವ ವ್ಯಕ್ತಿಗೆ ವಾಹನದ ಚಾಲನಾ ಪರವಾನಿಗೆ ಇರುವ ಬಗ್ಗೆ ಮಾಹಿತಿ ಪಡೆದುಕೊಂಡರಾ ಎಂದರೆ ಮೃತನ ವ್ಯಕ್ತಿಯ ಕುಟುಂಬಸ್ಥರು ಪರವಾನಗಿ ಇದೆ ಎಂದು ಹೇಳಿರುತ್ತಾರೆ. ಮೃತನ ವ್ಯಕ್ತಿಗೆ ಚಾಲನೆ ಮಾಡಲು ಬರುತ್ತಿರಲಿಲ್ಲ, ಮೃತನಿಗೆ ಸಹಾಯ ಮಾಡಲು

ಸುಳ್ಳು ಪ್ರಕರಣನ್ನು ದಾಖಲಾತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-17 ರಲ್ಲಿ ರಸ್ತೆಯು ನೇರವಾಗಿ ಇದೆ ಎಂದು ತೋರಿಸಿ ಸುಳ್ಳು ಕಚ್ಚ ನಕ್ಷೆಯನ್ನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ಸೃಷ್ಟಿ ಮಾಡಿ, ಆತನಿಂದ ಬಲವಂತವಾಗಿ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-16 ರಲ್ಲಿ ಬರೆದಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ-15 ಅನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತನಿಗೆ ಪರಿಹಾರ ಕೊಡಿಸಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರಿಂದ 10 ರಲ್ಲಿ ಕಂಡ ವಾಹನಗಳು ಜಖಂ ಅಪಘಾತದಲ್ಲಿ ನಡೆಯದೇ ಇದ್ದರೂ ಸುಳ್ಳು ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆ. ನ್ಯಾಸಾ.ಹೇ. ನನ್ನ ಉ.ಬೆ.ಮಾಡಲಾಯಿತು ಓಹೇ.ಕೇ.ಸ. ಇದೆ ಎಂದು ಒಪ್ಪಿರುತ್ತಾರೆ

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಗೌರಿಬಿದನೂರು